# ಐಶ್ವರ್ಯ ಹೊಸ ಚಿತ್ರ!

ಮಗು ಇನ್ನೂ ಮಡಿಲಲ್ಲಿದೆ. ಹೊರಗಿನವರು ಯಾರಿಗೂ ಮಗುವನ್ನು ತೋರಿಸಿಲ್ಲ. ಸಿನಿಮಾ ಪತ್ರಿಕೆಯವರೊಬ್ಬರು 'ಮಗುವಿನ ಫೋಟೋ ನಮಗೆ ಮಾತ್ರ ಕೊಡಿ; ಐದು ಕೋಟಿ ರೂಪಾಯಿ ಕೊಡುತ್ತೇವೆ' ಎಂದರೂ ಐಶ್ವರ್ಯ ಮತ್ತು ಆಕೆಯ ಮಾವ ಅಮಿತಾಭ್ ಸಾಹೇಬರು ಒಪ್ಪಿಲ್ಲ. ಇಷ್ಟೆಲ್ಲದರ ಮಧ್ಯೆ ಅದು ಹೇಗೋ ಸಂಜಯ ಲೀಲಾ ಬನ್ಸಾಲಿ ಎಂಬ ಬುದ್ಧಿವಂತ ನಿರ್ಮಾಪಕ–ನಿರ್ದೇಶಕ ತನ್ನ ಮುಂದಿನ ಚಿತ್ರಕ್ಕೆ ಐಶ್ವರ್ಯ ರೈಯ ಕಾಲ್‌ಷೀಟ್ ಪಡೆದು ಹೋದದ್ದು ಬಾಲಿವುಡ್‌ನಲ್ಲಿ ವರ್ಷದ ಕೊನೆಯ ದೊಡ್ಡ ಸುದ್ದಿ!

ಸಂಜಯ ಲೀಲಾ ಬನ್ಸಾಲಿ ಕಳೆದ ವಾರ ಹೆತ್ತು ಮಲಗಿರುವ ಐಶ್ವರ್ಯ ರೈ ಮತ್ತು ಆಕೆಯ ಮಗುವನ್ನು ನೋಡಲು ಹೋಗಿದ್ದರಂತೆ. ಅದೂ ಇದೂ ಮಾತನಾಡಿ, ತನ್ನ ಕನಸಿನ ಯೋಜನೆ 'ಬಾಜಿರಾವ್ ಮಸ್ತಾನಿ' ಎಂಬ ಸಿನಿಮಾದ ಕಥೆ ಬಿಚ್ಚಿದ್ದಾರೆ. 'ಈ ಚಿತ್ರದ ಹೀರೋಯಿನ್ ನೀನೇ ಆಗಬೇಕು' ಎಂದು ಒತ್ತಾಯಿಸಿದ್ದಾರೆ. ಕಥೆ ಕೇಳಿದ ಐಶ್ವರ್ಯಗೂ ಖುಷಿಯಾಗಿ 'ಯೆಸ್' ಎಂದಿದ್ದಾಳೆ!

ಮರಾಠಿ ಯೋಧ ಬಾಜಿರಾವ್ ಕುರಿತ ಈ ಚಿತ್ರವನ್ನು ಮಾಡಬೇಕೆಂದು ಬನ್ಸಾಲಿ 2003ರಲ್ಲೇ ನಿರ್ಧಾರ ಮಾಡಿದ್ದರು. ಅದು ಸಲ್ಮಾನ್ ಖಾನ್– ಐಶ್ವರ್ಯ ಜೋಡಿ ಯಶಸ್ಸಿನ ತುತ್ತ ತುದಿಯಲ್ಲಿದ್ದ ಕಾಲ. ಆಗ ಹೀರೋ ಪಟ್ಟಕ್ಕೆ ಸಲ್ಮಾನ್ ಹೆಸರೇ ಇತ್ತು. ಆದರೆ ಈಗ ಬದಲಾದ ಸನ್ನಿವೇಶದಲ್ಲಿ ಶಾರೂಕ್ ಖಾನ್ ನಾಯಕನಾಗುವುದು ಖಚಿತವಾಗಿದೆ. ಶಾರೂಕ್‌ಗೆ ಈ ಹಿಂದೆಯೇ ಕಥೆ ಹೇಳಿದ್ದು ಆತನೂ ಒಪ್ಪಿಕೊಂಡಿದ್ದಾನಂತೆ. ಚಿತ್ರ ಮುಂದಿನ ವರ್ಷ ಸೆಟ್ಟೇರಲಿದೆಯಂತೆ!

■ ಬಿಂದು




